ಡೈರಿ ವಿಶ್ವನಾಥ್, ಬೆಂಗಳೂರು
*ನಿಮ್ಮ ಸ್ಮಾರಕಕ್ಕೆ ಯಾವ ಹೆಸರಿಡಬೇಕು?*



ಯಾವ ಸ್ಮಾರಕಕ್ಕೆ? ನನ್ನ ಬರಹವನ್ನು ಮೆಚ್ಚಿ ಮುಂದಕ್ಕೊಯ್ದವರೆಲ್ಲಾ ನನ್ನ ಸ್ಮಾರಕಗಳೇ!

ಎಂ.ಎ. ಕುಮಾರ್, ಬೆಂಗಳೂರು
*ದೇವಸ್ಥಾನದ ಪೂಜಾರಿಗಳಿಗೆ ಸಿಕ್ಸ್ ಪ್ಯಾಕ್ ಮೈಕಟ್ಟು ಯಾಕಿಲ್ಲ?*
ಹರೆಯದ ಹುಡುಗಿಯರ ಗಮನ ದೇವರ ಮೇಲೆಯೇ ನೆಟ್ಟಿರಲಿ ಎಂಬ ಸದುದ್ದೇಶ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
*ಕುಮಾರಿಗೂ, ಶ್ರೀಮತಿಗೂ ಏನು ವ್ಯತ್ಯಾಸ?*
ತಾಳಿ.

ವೈ.ಎನ್. ಸುಂದರೇಶನ್, ಮೈಸೂರು
*ಹುಡುಗಿಯರಿಗಿಂತ ಹುಡುಗರೇ ಹೆಚ್ಚು ಕನ್ನಡಿಪ್ರಿಯರಾಗಿದ್ದಾರೆ. ಕಾರಣವೇನು?*
ಹಿಂದಿನ ಸೀಟಿನಲ್ಲಿ ಕುಳಿತವಳ ಅಂದವನ್ನು ಕನ್ನಡಿಯಲ್ಲೇ ಆಗಾಗ್ಗೆ ಸವಿಯುವ ಅಭ್ಯಾಸಬಲ.

ಬಿ. ಚಂದ್ರೇಗೌಡ, ಬೆಂಗಳೂರು
*ಸತ್ತನಂತರ ಮನುಷ್ಯ ಒಂಟಿಯಾಗಿ ನಡೆಯುತ್ತಾ ಕೈಲಾಸ ಸೇರುತ್ತಾನಂತೆ. ನಿಜವೆ?*




ಇನ್ನೇನು ಮಾಡಲಾದೀತು; ಸತ್ತಾಗ ಬರಿಗೈಯಾದ್ದರಿಂದ ಬಸ್‌ಚಾರ್ಜಿಗೂ ಹಣ ಇರಲ್ವಲ್ಲ!

ಎ. ಶಾರದ, ಕೊಟ್ಟೂರು
*ಚಳಿ ತಡೆಯದ, ಮಳೆಗೆ ಬೇಸರಿಸುವ, ಬಿಸಿಲಿಗೆ ಸುಸ್ತಾಗುವ ಮನುಷ್ಯನಿಗೆ ನೆಮ್ಮದಿ ಯಾವಾಗ?*
ಬೇಸಿಗೆಯಲ್ಲಿ ಹಿಲ್ ರೆಸಾರ್ಟ್‌ನಲ್ಲಿರುವ ಟಿವಿಯಲ್ಲಿ ಮಳೆ ಹೀರೋಯಿನ್‌ನನ್ನು ನೋಡುತ್ತಾ ಕುಳಿತಾಗ.

ಚೈತ್ರಾ ಕುಕ್ಕೆಮನೆ, ಬೆಂಗಳೂರು
*ಪ್ರೇಯಸಿಗೆ 'ಚಂದ್ರನನ್ನೇ ತಂದುಕೊಡುತ್ತೇನೆ' ಎನ್ನುವ ಪ್ರಿಯತಮ ತನ್ನ ತಂದೆತಾಯಿಯರ ಮನವೊಲಿಸಲೇಕೆ ಸೋಲುತ್ತಾನೆ?*
ಶುಕ್ಲಪಕ್ಷದಲ್ಲಿ ಶುಭ ಸರ್ವೇಸಾಮಾನ್ಯ; ಪಿತೃಪಕ್ಷ ಹಾಗಲ್ಲವಲ್ಲ!

ದೇವೇಂದ್ರ, ಕಡೂರು
*ತಿಳಿದಿರುವುದಕ್ಕಿಂತ ಕಡಿಮೆ ಹೇಗೆ ಮಾತನಾಡೋದು ಸಾರ್?*
ತುಟಿ ಬಿಚ್ಚಲೂ ಅವಕಾಶ ನೀಡದ ಆರ್ನಬ್ ಗೋಸ್ವಾಮಿಯಂತಹವರ ಮುಂದೆ ಕುಳಿತರಾಯ್ತು!

ರತ್ನಜ, ಮೈಸೂರು
*ವಿದ್ಯೆಯುಳ್ಳವನ ಮುಖ ಮುದ್ದು ಬರುವಂತಿರುತ್ತದಂತೆ. ನಾನು ನಿಮ್ಮ ಮುಖ ನೋಡಬೇಕಲ್ಲಾ ರಾಂಜೀ?*
ಅಯ್ಯೋ! ನೋಡಿದರೆ ನನಗೆ ವಿದ್ಯೆಯಿಲ್ಲವೆಂದು ತಿಳಿದುಬಿಡುತ್ತದೆ. ಬೇಡಪ್ಪಾ....!

ಮಲ್ಲನಗೌಡ ಪಾಟೀಲ, ರಂಭಾಪೂರ
*ಗಂಡನನ್ನು ಪತಿಯೇ ದೇವರು ಎನ್ನುತ್ತಾರೆ. ಹೆಂಡತಿಯನ್ನು ಪತ್ನಿಯೇ ದೇವರು ಎನ್ನುವುದಿಲ್ಲ. ಏಕೆ?*
ಹಾಗೆ ಹೇಳಿದ ತಕ್ಷಣ 'ನನ್ನನ್ನು ಸಂಪ್ರೀತಳಾಗಿಸಲು ತಾ ನಗ, ನಾಣ್ಯ, ವಸ್ತ್ರ' ಎಂದಾಳೆಂಬ ಭಯ!

ಬಿ.ಆರ್. ಸುರೇಶ್, ಶಿವಮೊಗ್ಗ
*ಪ್ರಾಯಕ್ಕೆ ಬಂದ ಹುಡುಗಿಯರ ಕತ್ತು ನೆಟ್ಟಗೆ ನಿಲ್ಲುವುದಿಲ್ಲವಂತೆ; ಏಕೆ?*
ಮೆಚ್ಚುಗೆಯ ಶಿಳ್ಳೆಗಳು ಬಂದ ಕಡೆಯಲ್ಲಾ ತಿರುಗಿ ತಿರುಗಿ ನೋಡಬೇಕಾಗುವುದರಿಂದ.

ಎನ್. ಮಂಜುನಾಥ್, ಬೆಂಗಳೂರು
*ಆಭರಣಗಳ ಅಂಗಡಿಯ ಒಡೆಯರೇನಾದರೂ ಮುಖ್ಯಮಂತ್ರಿಯಾದರೆ ಮತದಾರರಿಗೆ ಒಡವೆ ಫ್ರೀ ಅಲ್ವಾ ರಾಂ ಭಯ್ಯಾ?*
ಉಂಟೇ? ಎಲ್ಲರನ್ನೂ 'ಚಿನ್ನಾ' ಎನ್ನುತ್ತಾ ಎಲ್ಲರಿಂದಲೂ ಇಷ್ಟಿಷ್ಟು ಒರೆಗೆ ಹಚ್ಚಿ ಕಿತ್ತುಕೊಂಡಾರು.

ವಿ.ಹೇಮಂತಕುಮಾರ್, ಬೆಂಗಳೂರು
*ಪ್ರೀತಿಯ ನದಿ ಹರಿಯುತ್ತಾ ಸಾಗಿ ಸೇರುವುದೆಲ್ಲಿಗೆ?*
ಸಾಲದ ಕಡಲಿಗೆ!

## ಬಹುಮಾನಿತ ಪ್ರಶ್ನೆ

ನವಿರವಿ, ಬಾಳೆಹೊನ್ನೂರು
*ಕುರಿ ಕೊಬ್ಬಿದರೆ ಕಟುಕನಿಗೆ ಲಾಭ. ಕಟುಕನೇ ಕೊಬ್ಬಿದರೆ?*
ಹತ್ತಿರದ ಡಯಾಬಿಟಿಸ್, ಹಾರ್ಟ್ ಸ್ಪೆಷಲಿಸ್ಟ್ ಆಸ್ಪತ್ರೆಗಳಿಗೆ ಲಾಭ.

ಬಾಲಕ, ಬೀದರ್
*ಪ್ರಜಾರಾಜ್ಯ ಭಾರತದಲ್ಲಿ ಯಾವಾಗ ಬರುತ್ತದೆ ಗುರು?*
ತಮ್ಮ ತಮ್ಮ ಮತಗಳನ್ನು ಹರಾಜಿಗೆ ಹಾಕಿಕೊಳ್ಳುವುದನ್ನು ನಿಲ್ಲಿಸಿದಾಗ ಸಿಸ್ಯಾ.

ಕೆ.ಜಿ. ಶೇಖರಪ್ಪ, ಅರಸೀಕೆರೆ
*ನನ್ನ ಇತ್ತೀಚಿನ ಪ್ರಶ್ನೆಗಳನ್ನು ಕಸದ ಬುಟ್ಟಿಗೆ ಹಾಕಿದಿರೆಂದು ಕಾಣುತ್ತದೆ?*
ಇನ್ನೂ ಇಲ್ಲ. ಪ್ರಶ್ನೆಗಳಲ್ಲಿ ಆರ್ದ್ರತೆ ಇದ್ದುದರಿಂದ ವೆಟ್ ವೇಸ್ಟೋ, ಡ್ರೈ ವೇಸ್ಟೋ ನಿರ್ಧರಿಸಲಾಗಿಲ್ಲ.

ಕೆ.ಹೆಚ್. ರಾಮಕೃಷ್ಣಾರೆಡ್ಡಿ, ಬೆಂಗಳೂರು
*ಡಾಕ್ಟರು ಆಗಲೇ ಹುಟ್ಟಿದ ಮಗುವನ್ನು ಆಸ್ಪತ್ರೆಯಲ್ಲಿ ತೂಕ ಮಾಡುವುದೇಕೆ?*



ಬಿಲ್ ಮೊತ್ತವನ್ನು ಆ ತೂಕದಿಂದ ಭಾಗಿಸಿ ಅಂದಿನ ಮಗುವಿನ ಕಿಲೋಗ್ರಾಂ ಬೆಲೆ ನಿರ್ಧರಿಸಲು.

ಕೆ.ಎಂ. ವೀರೇಶ, ಕೂಡ್ಲಿಗಿ
*ಸಕಲರಿಗೂ ಲೇಸನು ಬಯಸುವ ಯೋಜನೆಗಳನ್ನು ಸರ್ಕಾರ ಕೈಗೊಳ್ಳದಿರಲು ಕಾರಣವೇನು?*
ಕೆಲವರು ಪಂಪ್ ಶೂಸ್, ಬೆಲ್ಟ್ ಚಪ್ಪಲಿಗಳನ್ನು ಬಳಸುವುದರಿಂದ ಲೇಸ್ ವೇಸ್ಟ್ ಆಗತ್ತೇಂತ.

ರತ್ನಾ ಅಶೋಕ ಗೊರವರ, ನವಲಗುಂದ
*ಈಗಲೂ ಸತಿ ಸಹಗಮನ ಪದ್ಧತಿ ಇದ್ದಿದ್ದರೆ ಹೇಗಿರುತ್ತಿತ್ತು?*
ಅದಕ್ಕೆಂದೇ 'ಸತಿ ಚಾನಲ್ 24/7' ಶುರುವಾಗಿ ಶವಗಳು ಉರಿದು ಬೇಯುವ 'ಬ್ರೇಕಿಂಗ್ ನ್ಯೂಸ್' ದಿನವೆಲ್ಲ ಇರುತ್ತಿತ್ತು.

■ ರಾಮ್